Madam SPEAKER.—I agree with the Hon. Minister's point of order.

ಶ್ರೀ ವಾಟಾಳ್ ನಾಗರಾಜ್.—ಈ ಸಂಸ್ಥೆ ಸರಕಾರದ್ದೇ ಅಲ್ಲವೇ ಎನ್ನುವುದನ್ನು ಮಾತ್ರ ಇಲ್ಲಿ ಸರಕಾರ ಒಂದು ಶಬ್ದ ಹೇಳಿದರೆ ಸಾಕು.

ಅಧ್ಯಕ್ಷರು.—ಇದರ ಎಲ್ಲ ಉತ್ತರವನ್ನು ನಾಳೆ ಕೊಡುತ್ತಾರೆ. ಅಲ್ಲಿಯವರೆಗೆ ತಾವು ಸ್ವಲ್ಪ ಅವಕಾಶ ಕೊಡಿ.

ಶ್ರೀವಿ. ಎನ್. ಪಾಟೀಲ್.—ಇದರ ಬಗ್ಗೆ ಮಂತ್ರಿಗಳು ನಾಳೆ ಉತ್ತರ ಕೊಡಲಿ. ಇದರ ಬಗ್ಗೆ ಒಂದು ಸಲಹೆ ನಾನು ಹೇಳುವುದು, ಈ ಸಂಸ್ಥೆ ಸರಕಾರದ್ದಾಗಿದ್ದರೆ ಅದರಲ್ಲಿ ಮುಖ್ಯಮಂತ್ರಿಗಳ ಫೋಟೋ ಹಾಕಿಸಲಿ. ಹಾಗಿಲ್ಲದೇ ಇದ್ದರೆ ಇದರಲ್ಲಿ ಮುಖ್ಯ ಮಂತ್ರಿಗಳ ಫೋಟೋ ಹಾಕುಬೇಡ ಎನ್ನುವ ವಿಚಾರವನ್ನೂ ಗಮನದಲ್ಲಿಟ್ಟು ಉತ್ತರ ಕೊಡಲಿ.

Collection of levy paddy in the Malnad Areas

ಶ್ರೀ ಕೋಣಂದೂರು ಲಿಂಗಪ್ಪ.—ನಿನ್ನೆ ತಮ್ಮ ಅಪ್ಪಣೆ ಕೇಳಿದ್ದೆ. ಅದು ನಮ್ಮ ಮಲೆನಾಡಿನಲ್ಲಿ ಎಲ್ಲಿ ಕಡೆಗಳಲ್ಲೂ ಲೆವಿ ಭತ್ತ ವಸೂಲು ಮಾಡುತ್ತಿರುವುದರ ಬಗ್ಗೆ.

ಅಧ್ಯಕ್ಷರು.—ಇದನ್ನು ಸರಕಾರದ ಕಡೆಗೆ ಕಳುಹಿಸಲಾಗಿದೆ. ಇಂದು ಮಾನ್ಯ ಮಂತ್ರಿಗಳೂ ಬಂದಿಲ್ಲ. ಅವರು ಬಂದ ನಂತರ ಇದರ ಉತ್ತರ ಆಮೇಲೆ ತೆಗೆದುಕೊಳ್ಳಬಹುದು.

ಶ್ರೀ ಕೋಣಂದೂರು ಲಿಂಗಪ್ಪ.—ನಾನು ಕೆಲವು ಮುಖ್ಯವಾದ ವಿಚಾರಗಳ ಬಗ್ಗೆ ಅಲ್ಪಕಾಲಾವಧಿ ಪ್ರಶ್ನೆ ಹಾಗೂ ಕಾಲಿಂಗ್ ಅಟೆನ್‌ಷನ್ ಕಳುಹಿಸಿ 8—10 ದಿನಗಳಾದರೂ ಇದರ ಬಗ್ಗೆ ಇಲ್ಲಿ ಸರಕಾರ ಏನೂ ಏಕೆ ಪ್ರಸ್ತಾಪ ಮಾಡುತ್ತಿಲ್ಲ? ಇದನ್ನು ಸರಕಾರದ ಕಡೆಯಿಂದ ತಾವು ತರಿಸಿಕೊಡಬೇಕು.

ಅಧ್ಯಕ್ಷರು.—ಸರಕಾರದಿಂದ ಉತ್ತರ ಬಂದಿಲ್ಲ. ಅದು ಬಂದ ನಂತರ ಇಲ್ಲಿ ತೆಗೆದು ಕೊಳ್ಳೋಣ.

ಶ್ರೀ ಕೋಣಂದೂರು ಲಿಂಗಪ್ಪ.—ಉತ್ತರ ಬರಲಿಲ್ಲ ಎಂದರೆ ನಮ್ಮ ಮಲೆನಾಡಿನ ಬಹು ಜ್ವಲಂತವಾದ ಪ್ರಶ್ನೆಗಳನ್ನೂ ಕಳುಹಿಸಿದರೂ ಸರಕಾರದ ಕಡೆಯಿಂದ ಉತ್ತರ ಬಾರದೇ ಹೋದರೆ ಏನು ಮಾಡುವುದು? ನಮ್ಮ ಮಲೆನಾಡಿನಲ್ಲಿ ಕಟ್ಟಿಗೆ ಸಮಸ್ಯೆ ಬಹುವಾಗಿ ದಿನೇ ದಿನೇ ಹೆಚ್ಚಾಗುತ್ತಿದೆ. ಇದು ನಮ್ಮ ಭಾಗದ ಜನರ ಸಾವು ಬದುಕಿನ ಸಮಸ್ಯೆ. ಇದರ ಬಗ್ಗೆ ಸರಕಾರ ಏಕೆ ಇನ್ನೂ ಉತ್ತರ ಕೊಡುತ್ತಿಲ್ಲ?

ಶ್ರೀ ಹೆಚ್. ಡಿ. ದೇವೇಗೌಡ.—ನಾನು 312ರ ನಿಯಮದ ಪ್ರಕಾರ ಮಾನ್ಯ ಲೋಕೋಪಯೋಗಿ ಮಂತ್ರಿಗಳ ಗಮನಕ್ಕೆ ಬಿಜಾಪುರ ಜಿಲ್ಲೆಯಲ್ಲಿರುವ ಒಂದು ಕೆರೆಯ ಬಗ್ಗೆ ಎಂದರೆ ಮುದ್ದೇಬಿಹಾಳಿನ ಮಡಕೇಶ್ವರ ಕೆರೆ ಬಗ್ಗೆ ವಿವರಗಳನ್ನು ಕೇಳಿದ್ದೆ. ಇದರ ಬಗ್ಗೆ ಇಂದು ಇಲ್ಲಿ ಪ್ರಸ್ತಾಪ ಮಾಡು ಎಂದರೆ ಮಾಡುತ್ತೇನೆ. ಇಲ್ಲವೇ ವಿವರಗಳನ್ನ ಸಂಗ್ರಹಣೆ ಮಾಡಿದ ಮೇಲೆ ತೆಗೆದು ಕೊಳ್ಳಬೇಕೆಂದು ಅಧ್ಯಕ್ಷರು ಹೇಳಿದರೆ ಹಾಗೇ ಮಾಡಬಹುದು.

ಅಧ್ಯಕ್ಷರು.—ಇದನ್ನು ನಾಳೆ ತೆಗೆದುಕೊಳ್ಳಬಹುದು.

Mysore Land Reforms Amendment) Bill, 1972

Motion to consider

(Debate Contd.)

† ಶ್ರೀ ಎಸ್. ವೈ. ಪಾಟೀಲ್ (ಸಿಂದಗಿ).—ಮಾನ್ಯ ಅಧ್ಯಕ್ಷರೇ, ಲ್ಯಾಂಡು ರಿಫಾರಂಸ್ ಅಮೆಂಡುಮೆಂಟ್ ಬಿಲ್ಲಿನ ಮೇಲೆ ಕೆಲವು ದಿನಗಳಿಂದ ಇಲ್ಲಿ ಚರ್ಚೆಯಾಗುತ್ತಿದೆ, ಈ ಚರ್ಚೆಯನ್ನು ನೋಡಿದರೆ ಸಾಧಾರಣವಾಗಿ ಈ ಭೂಮಿ ವಿಷಯವಾಗಿ ಯಾವುದೋ ಕೆಲವು ವಿಚಾರಗಳನ್ನು